# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.13654/2019

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಬಸವೇಶ್ವರನಗರ ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿ : ಶ್ರೀ ಪ್ರಕಾಶ್.ಜಿ.ಎನ್.
ಬಿನ್. ಗಂಗಯ್ಯ, 46 ವರ್ಷ,
ವಾಸಃ 36, 12ನೇ ಮೈನ್,
ಪೈಪ್ ಲೈನ್ ಬಳಿ, ಕೆಂಪೇಗೌಡ ಲೇಔಟ್,
ಚೌಡೇಶ್ವರಿ ನಗರ, ಬೆಂಗಳೂರು.

## ದೋಷಾರೋಪಣೆ

ಶ್ರೀಮತಿ ರೇಷ್ಮಾ ಕಲಕಪ್ಪ ಗೋಣಿ, ಬಿ.ಎ. ಎಲ್.ಎಲ್.ಎಂ., 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿದ್ದೇನೆ.

ಮೊದಲನೆಯದಾಗಿ, ಬೆಂಗಳೂರು ನಗರ, ಬಸವೇಶ್ವರನಗರ ಪೊಲೀಸ್ ಠಾಣಾ ಸರಹದ್ದಿನ ವ್ಯಾಪ್ತಿಯಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಮೋಸ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಸಾಕ್ಷಿ-3 ರವನ್ನು ಕುರಿತು ತಾವಿಬ್ಬರೂ ಸೇರಿ ಪ್ರಿಂಟಿಂಗ್ ಪ್ರೆಸ್ ಹಾಕಿದರೆ ಕರ್ನಾಟಕ ಸರ್ಕಾರದ ಶಾಲಾ ಕಾಲೇಜಿನ ಆರ್ಡರ್ ಗಳು ಇದ್ದು, ಹೆಚ್ಚಿನ ಲಾಭ ಬರುವುದಾಗಿ ತಿಳಿಸಿ ಜೊತೆಯಾಗಿ ಬ್ಯುಸಿನೆಸ್ ಮಾಡೋಣ ಎಂದು ಹೇಳಿ 15 ಲಕ್ಷ ಹಣ ಹೊಂದಿಸಿ ಕೊಡಿ ಬ್ಯಾಂಕಿಗಿಂತ ಹೆಚ್ಚು ಬಡ್ಡಿ ಕೊಡುವುದಾಗಿ ಸಾಕ್ಷಿ-3 ರವರನ್ನು ನಂಬಿಸಿ ಸಾಕ್ಷಿ-1 ರವರಿಗೆ ಈ ವಿಚಾರವನ್ನು ತಿಳಿಸಿದ್ದಾಗ್ಯೂ, ನಂತರ ಸಾಕ್ಷಿ-3 ರವರನ್ನು ಸಾಕ್ಷಿ-1 ರವರು ನಂಬಿ ದಿನಾಂಕ 23-03-2016 ರಿಂದ 25.05.2016 ರ ಅವಧಿಯಲ್ಲಿ ಬಸವೇಶ್ವರನಗರ ಶಾಖೆಯ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್

ಬ್ಯಾಂಕಿನಲ್ಲಿ ಸಾಕ್ಷಿ-1 ರವರ ಖಾತೆಯಲ್ಲಿದ್ದ ಒಟ್ಟು 17 ಲಕ್ಷ ರೂ. ಗಳನ್ನು ಸಾಕ್ಷಿ-3 ರವರ ಮುಖಾಂತರ ಆರೋಪಿಯಾದ ನಿಮಗೆ ನೀಡಿದ್ದು, ಆ ಹಣದಿಂದ ಬೆಂಗಳೂರು ನಗರ ಲಗ್ಗೆರೆಯಲ್ಲಿ ಸಾಕ್ಷಿ-9 ರವರ ಕಟ್ಟಡದಲ್ಲಿ ಪ್ರಿಂಟಿಂಗ್ ಪ್ರೆಸ್ ನ್ನು ತೆರೆದು ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಖರೀದಿಸಿ, ನಂತರ ಸಾಕ್ಷಿ-1 ರವರಿಗೆ ಹಣವನ್ನು ವಾಪಸ್ ಕೊಡದೇ, ಸಾಕ್ಷಿ-3 ರವರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳದೇ ಇಬ್ಬರಿಗೂ ನಂಬಿಕೆ ದ್ರೋಹವೆಸಗಿರುವುದು ಭಾರತೀಯ ದಂಡ ಸಂಹಿತೆ ಕಲಂ.406 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತೀರಿ.

ಎರಡನೆಯದಾಗಿ, ಮೇಲ್ಕಂಡ ಸದರಿ ವಿಚಾರದಲ್ಲಿ ದಿನಾಂಕ 23.03.2016 ರಿಂದ 25.05.2016 ರ ಅವಧಿಯಲ್ಲಿ ಬಸವೇಶ್ವರನಗರ ಶಾಖೆಯ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಸಾಕ್ಷಿ-1 ರವರ ಖಾತೆಯಲ್ಲಿದ್ದ ಒಟ್ಟು 17 ಲಕ್ಷ ರೂ. ಗಳನ್ನು ಸಾಕ್ಷಿ-3 ರವರ ಮುಖಾಂತರ ಆರೋಪಿಯಾದ ನಿಮಗೆ ನೀಡಿದ್ದು, ಆ ಹಣದಿಂದ ನೀವು ಬೆಂಗಳೂರು ನಗರ ಲಗ್ಗೆರೆಯಲ್ಲಿ ಸಾಕ್ಷಿ-9 ರವರ ಕಟ್ಟಡದಲ್ಲಿ ಪ್ರಿಂಟಿಂಗ್ ಪ್ರೆಸ್ ನ್ನು ತೆರೆದು ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಖರೀದಿಸಿ, ನಂತರ ಸಾಕ್ಷಿ-1 ರವರಿಗೆ ಹಣವನ್ನು ವಾಪಸ್ ಕೊಡದೇ, ಸಾಕ್ಷಿ-3 ರವರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳದೇ ಇಬ್ಬರಿಗೂ ನಂಬಿಕೆ ದ್ರೋಹವೆಸಗಿ ಮೋಸ ಮಾಡಿರುವುದು ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಸದರಿ ಮೇಲ್ಕಂಡ ವಿಚಾರದಲ್ಲಿ ದಿನಾಂಕ 11.06.2018 ರಂದು ಸಂಜೆ ಸುಮಾರು 4-30 ಗಂಟೆಯಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ಕುರಿತು ನೀನು ಇದೇ ರೀತಿ ಮನೆ ಬಳಿ ಬಂದು ಫೋನ್ ಮಾಡಿ ಹಣ ಕೇಳಿ ತೊಂದರೆ ಕೊಟ್ಟರೆ, ಈ ವಿಚಾರ 4 ಜನರಿಗೆ ಗೊತ್ತಾಗಿ ತನಗೆ ಅವಮಾನವಾದರೆ ನಿನಗೆ ಒಂದು ಗತಿ ಕಾಣಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುವುದು ಭಾರತೀಯ ದಂಡ ಸಂಹಿತೆ ಕಲಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ

ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 24.07.2024

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

## **4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ**

## **ಸಿ.ಸಿ. ನಂ.13654/2019**

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಬಸವೇಶ್ವರನಗರ ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿ : ಶ್ರೀ ಪ್ರಕಾಶ್.ಜಿ.ಎನ್.
ಬಿನ್. ಗಂಗಯ್ಯ, 46 ವರ್ಷ,

## **ಆರೋಪಣೆ**

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 24.07.2024

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.